ಸಾಕ್ಷಿಯನ್ನು ದಿ: 18.01.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ - 2

**<u>ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-</u>**

1. ನನಗೆ ಕನ್ನಡ ಓದಲು ಬರುತ್ತದೆ. ವಾದಿ ನನಗೆ ಅಣ್ಣನಾಗಬೇಕು. ವಾದಿಗೆ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ನನ್ನ ಅಣ್ಣನ ಮಕ್ಕಳು ಆರೋಗ್ಯವಾಗಿದ್ದಾರೆಂದರೆ ಸರಿ. ನಾನು ಈ ದಾವೆಯ ಬಗ್ಗೆ ತಿಳಿದುಕೊಂಡಿರುತ್ತೇನೆ. ಸರ್ವೆ ನಂ.28 ರಲ್ಲಿ 5 ಫೋಡುಗಳಿವೆ. ವಾದಿ ಈ ದಾವೆಯನ್ನು ಸರ್ವೆ ನಂ.28/1 ಮತ್ತು 2 ಕ್ಕೆ ರಸ್ತೆ ಬೇಕು ಎಂದು ಈ ದಾವೆ ಸಲ್ಲಿಸಿರುತ್ತಾರೆ. ಸರ್ವೆ ನಂ.28 ನನ್ನ ತಂದೆಗೆ ಸೇರಿದ್ದು. ಸರ್ವೆ ನಂ.28/1 ಮತ್ತು 2 ನ್ನು ವಾದಿ ಶಿವಮೂರ್ತಿಯವರಿಂದ ಕ್ರಯಕ್ಕೆ ಪಡೆದಿರುತ್ತಾರೆಂದರೆ ಸರಿ. ಸದರಿ ಕ್ರಯ ಪತ್ರ ಹಾಜರುಪಡಿಸಲು ನನಗ ತೊಂದರೆಯಿಲ್ಲ. ಸರ್ವೆ ನಂ.28 ರಲ್ಲಿ ದಾರಿ ಇದೆಯೆಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ದಾವಾ ಆಸ್ತಿಯ ಉತ್ತರ ನನ್ನ ಭಾಗಕ್ಕೆ ಬಂದ ಸರ್ವೆ ನಂ.30 ರ ಜಮೀನು ಇರುತ್ತದೆ. ನನ್ನ ಜಮೀನಿನ ಉತ್ತರ ದಿಕ್ಕಿಗೆ ವಾದಿಯ ಜಮೀನಿದೆ, ಅದರ ಉತ್ತರ ದಿಕ್ಕಿಗೆ ನನಗೆ ಸೇರಿದ ಜಮೀನು ಇರುತ್ತದೆ. ಅನುಸೂಯಮ್ಮನ ಜಮೀನು ನನ್ನ ಜಮೀನಿನ ಉತ್ತರ ದಿಕ್ಕಿಗೆ ಬರುತ್ತದೆ. ಅನುಸೂಯಮ್ಮನ ಜಮೀನಿನ ಉತ್ತರ ದಿಕ್ಕಿಗೆ ಹೆಬ್ಬಾಳ ನಾಲೆ ಮತ್ತು ರಸ್ತೆ ಬರುತ್ತದೆ ಎಂದರೆ ಸರಿಯಲ್ಲ. ದೇವಸ್ಥಾನ ರಸ್ತೆ ನಮ್ಮ ಜಮೀನಿಗೆ ಹೋಗುತ್ತದೆಂದರೆ ಸರಿಯಲ್ಲ. ಸರ್ವೆ ನಂ.28/4 ಕೆಂಪಾಚಾರಿಗೆ ಸೇರಿರುತ್ತದೆ. ಸರ್ವೆ ನಂ.28/4 ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ಸದರಿ ಕೆಂಪಾಚಾರಿಯನ್ನು ರಸ್ತೆಯಿದ್ದ ಬಗ್ಗೆ ಸಾಕ್ಷಿ ನುಡಿಸಲು ನನಗೆ ತೊಂದರೆ ಇಲ್ಲ. ನಾವು ಜಮೀನಿಗೆ ಓಡಾಡಲು ನಾವು ರಸ್ತೆಯಅನನಲು ನಮ್ಮ ತಂದೆಯ ಕಾಲದಿಂದಲೂ ಬಿಟ್ಟುಕೊಂಡಿದ್ದೆವು. ಪ್ರತಿವಾದಿಗಳ ಜಮೀನಿನ ದಕ್ಷಿಣಕ್ಕೆ ಹಳ್ಳ ಇರುತ್ತದೆ ಎಂದರೆ ಸರಿ. ಸದರಿ ಹಳ್ಳದವರೆಗ ಸರ್ಕಾರಿ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ಹಳ್ಳದಿಂದ ಉತ್ತರ ದಿಕ್ಕಿಗೆ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿ ಪ್ರತಿವಾದಿಯರ ಜಮೀನು ಇರುತ್ತದೆ ಎಂದರೆ ಸರಿ. ನಿಡಿ.1 ರಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿ. ಸರ್ವೆ ನಂ.28/3 ರಲ್ಲಿ 2 ನೇ ಪ್ರತಿವಾದಿ ಹಿಪ್ಪುನೇರಳೆ

ಬೆಳದಿರುತ್ತಾನೆಂದರೆ ಸರಿ. ಸಾಕ್ಷಿಗೆ ಇನ್ನೊಂದು ಫೋಟೋ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿದ ಕಾರಣ ಅದನ್ನು ನಿಡಿ.2 ಎಂದು ಗುರುತಿಸಲಾಯಿತು. ನಿಡಿ.2 ರ ಪ್ರಕಾರ 2 ನೇ ಪ್ರತಿವಾದಿ ಹಿಪ್ಪು ನೇರಳೆ ಬೆಳೆದಿರುತ್ತಾನೆಂದರೆ ಸರಿ.

2. ವಾದಿ ಕ್ರಯಕ್ಕೆ ಪಡೆದ ಕ್ರಯಪತ್ರದಲ್ಲಿ ಪಶ್ಚಿಮ ದಿಕ್ಕಿನಲ್ಲಿ ಬಂಡಿದಾರಿ ಇದ್ದ ಬಗ್ಗೆ ನಮೂದು ಇರುವುದಿಲ್ಲ. ಸರ್ವೆ ನಂ.28/5 ನ್ನು 2 ನೇ ಪ್ರತಿವಾದಿ ಕ್ರಯಕ್ಕೆ ಪಡೆದಿರುತ್ತಾರೆಂದರೆ ಸರಿ. ಸದರಿ 2 ನೇ ಪ್ರತಿವಾದಿಯ ಕ್ರಯಪತ್ರದ ಪಶ್ಚಿಮ ದಿಕ್ಕಿನಲ್ಲಿ ಬಂಡಿದಾರಿ ಇದ್ದ ಬಗಗೆ ನಮೂದಿರುವುದಿಲ್ಲ. ನಾವು ವಿಭಾಗ ಮಾಡಿಕೊಂಡಾಗ ಪಂಚಾಯಿತಿ ಪಾರಿಕತ್ತು ಬರೆದಿರುತ್ತೇವೆಂದರೆ ಸರಿ. ಸದರಿ ಪಂಚಾಯಿತಿ ಪಾಲು ಪಾರಿಕತ್ತಿನಲ್ಲಿ ಬಂಡಿದಾರಿ ಇರುವ ಬಗ್ಗೆ ಬರೆದಿರುವುದಿಲ್ಲ. ನಾನು ಈ ಮೊದಲು ಪ್ರತಿವಾದಿಗಳ ವಿರುದ್ದ ದಾವೆ ಸಲ್ಲಿಸಿದ್ದೆನು. ಸದರಿ ದಾವೆಯನ್ನು ಸರ್ವೆ ನಂ.28/2 ಕ್ಕೆ ಸಂಬಂಧಪಟ್ಟಂತೆ ಸಲ್ಲಿಸಿದ್ದೆನು. ಸದರಿ ದಾವೆಯಲ್ಲಿ ಪಶ್ಚಿಮ ದಿಕ್ಕಿಗೆ ಬಂಡಿದಾರಿ ಇದ್ದ ಬಗ್ಗೆ ಹೇಳಿಲ್ಲ. ನಾನು ಹಿಂದಿನಿಂದಲೂ ಹಲವಾರು ಪ್ರಕರಣಗಳನ್ನು ನ್ಯಾಯಾಲಯದಲ್ಲಿ ನಡೆಸಿರುತ್ತೇನೆಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ವಿರುದ್ದ ರಸ್ತೆಯಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಯಾವುದೇ ರಸ್ತೆ ಇಲ್ಲದಿದ್ದರೂ ಸಹ ರಸ್ತೆಯಿದೆ ಎಂದು ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಹೆಬ್ಬಾಳ ನಾಲೆಯ ರಸ್ತೆಯಿಂದ ನಮ್ಮ ಜಮೀನಿಗೆ ತಿರುಗಾಡುತ್ತಿದ್ದೇನೆಂದರೆ ಸರಿಯಲ್ಲ. ವಾದಿ ನ್ಯಾಯಾಲಯಕ್ಕೆ ಬಂದರೆ ಸತ್ಯ ಗೊತ್ತಾಗುತ್ತದೆಂದು ನಾನು ಅವರ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ